(ಸದನವನ್ನು ಮಧ್ಯಾಹ್ನ 2.01 ಗಂಟೆಗೆ ಮುಂದೂಡಲಾಯಿತು. ಸದನವು ಪುನಃ ದಿನಾಂಕ 27ನೇ ಜುಲೈ 2009ರಂದು ಸೋಮವಾರ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು).

805 ಶ್ರೀ ಬಂಡೆಪ್ಪ ಕಾಶ್ಯಂಪೂರ್ ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಬ್ಬು ಬೆಳೆಯುವ ಪ್ರದೇಶವೆಷ್ಟು; (ಜಿಲ್ಲಾವಾರು ವಿವರ ನೀಡುವುದು;)

ಆ) ಕಬ್ಬು ಬೆಳೆಯುವ ಪ್ರದೇಶಗಳಿಗೆ ಉಪಯೋಗಿಸುವ ನೀರಿನ ಪ್ರಮಾಣ ಎಷ್ಟು;

ಇ) ಅಂತಹ ಎಷ್ಟು ಪ್ರದೇಶಗಳಿಗೆ ಹನಿ ನೀರಾವರಿ ಅಳವಡಿಸಲಾಗಿದೆ;

ಈ) ಎಲ್ಲಾ ಪ್ರದೇಶಗಳಿಗೂ ಹನಿ ನೀರಾವರಿ ವ್ಯವಸ್ಥೆ ಮಾಡಿದರೆ ಉಳಿಯುವ ನೀರಿನ ಪ್ರಮಾಣ ಎಷ್ಟು;

ಉ) ಕಬ್ಬು ಬೆಳೆಯುವ ಎಲ್ಲಾ ಪ್ರದೇಶಗಳಿಗೂ ಹನಿ ನೀರಾವರಿ ವ್ಯವಸ್ಥೆ ಮಾಡುವುದರಿಂದ ಎಷ್ಟು ಮೆಗಾವ್ಯಾಟ್ ವಿದ್ಯುತ್ ಉಳಿತಾಯವಾಗುವುದು;

ಊ) ಹನಿ ನೀರಾವರಿಗಾಗಿ ವರ್ಷಕ್ಕೆ ನಿಗದಿಪಡಿಸಿರುವ ಅನುದಾನದ ಮೊತ್ತ ಎಷ್ಟು?

ಋ) ಹಾಗಿದ್ದಲ್ಲಿ, ನಿಗದಿಪಡಿಸಿದ ಅನುದಾನದಲ್ಲಿ ಖರ್ಚಾದ ಹಾಗೂ ಉಳಿಕೆ ಮೊತ್ತ ಎಷ್ಟು?

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು)

ಅ) ರಾಜ್ಯದಲ್ಲಿ ಕಬ್ಬು ಬೆಳೆಯುವ ವಿಸ್ತೀರ್ಣ 375923 ಹೆಕ್ಟೇರ್‌ಗಳು. ಜಿಲ್ಲಾವಾರು ವಿವರವನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) 12 ರಿಂದ 14 ತಿಂಗಳು ಕಬ್ಬು ಬೆಳೆಯಲು ಒಂದು ಹೆ.ಗೆ 150 ಸೆಂ.ಮೀ. ನೀರಿನ ಪ್ರಮಾಣ ಅಗತ್ಯವಿದೆ.

ಇ) 2003–04ನೇ ಸಾಲಿನಿಂದ 2008–09 ಸಾಲಿನವರೆಗೂ ರಾಜ್ಯದಲ್ಲಿ ಕಬ್ಬು ಬೆಳೆಗೆ 6753.77 ಹೆಕ್ಟೇರ್ ಪ್ರದೇಶಕ್ಕೆ ಹನಿ ನೀರಾವರಿಯನ್ನು ಅಳವಡಿಸಲಾಗಿರುತ್ತದೆ.

ಈ) ಸುಮಾರು ಶೇ. 50ರಷ್ಟು ನೀರಿನ ಉಳಿತಾಯವಾಗುವುದು.

ಉ) ಎಷ್ಟು ಮೆಗಾವ್ಯಾಟ್ ವಿದ್ಯುತ್ ಉಳಿತಾಯವಾಗುತ್ತದೆ ಎಂದು ಹೇಳಲು ಸಾಧ್ಯವಾಗುತ್ತಿಲ್ಲಾ.

ಊ) 2008–09ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಲಘು ನೀರಾವರಿ ಯೋಜನೆಗೆ ನಿಗದಿಪಡಿಸಲಾದ ರೂ. 11126.90 ಲಕ್ಷಗಳಲ್ಲಿ ರೂ. 8426.10 ಲಕ್ಷಗಳ ವೆಚ್ಚ ಭರಿಸಲಾಗಿರುತ್ತದೆ. ಸದರಿ ಅನುದಾನದಲ್ಲಿ ರೂ. 729.01 ಲಕ್ಷಗಳ ಅನುದಾನವನ್ನು 2542 ಹೆಕ್ಟೇಟ್ ಪ್ರದೇಶದಲ್ಲಿ ಹನಿ ನೀರಾವರಿ ಅಳವಡಿಸಲು ಉಪಯೋಗಿಸಲಾಗಿದೆ. ಹಾಗೂ ರೂ. 7693.46 ಲಕ್ಷ ಅನುದಾನವನ್ನು 83116 ಹೆಕ್ಟೇರ್ ಪ್ರದೇಶದಲ್ಲಿ ತುಂತುರು ನೀರಾವರಿಗಾಗಿ ಮತ್ತು ರೂ. 3.63 ಲಕ್ಷಗಳನ್ನು ಆಡಳಿತಾತ್ಮಕ ವೆಚ್ಚ ಭರಿಸಲು ಉಪಯೋಗಿಸಲಾಗಿದೆ. ಈ ಯೋಜನೆಯಡಿ ಶೇ. 76ರಷ್ಟು ಸಾಧನೆ ಮಾಡಲಾಗಿರುತ್ತದೆ.

2009–10ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಲಘು ನೀರಾವರಿ ಯೋಜನೆಯಡಿ 7408 ಹೆ. ಪ್ರದೇಶಕ್ಕೆ ಹನಿ ನೀರಾವರಿ ಮತ್ತು 126212 ಹೆಕ್ಟೇರ್ ಪ್ರದೇಶಕ್ಕೆ ತುಂತುರು ನೀರಾವರಿಗಾಗಿ ಕ್ರಮವಾಗಿ ರೂ. 1475.67 ಲಕ್ಷ ಮತ್ತು ರೂ. 7204.18 ಲಕ್ಷಗಳ ಕಾರ್ಯಕ್ರಮವು ಅನುಮೋದನೆಯಾಗಿರುತ್ತದೆ. ಈ ಅನುದಾನಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ರೂ. 4594.83 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

ಋ) 2008–09ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಲಘು ನೀರಾವರಿ ಯೋಜನೆಯಡಿ ಹನಿ ನೀರಾವರಿಗಾಗಿ ರೂ. 1896,98 ಲಕ್ಷಗಳ ಅನುದಾನವನ್ನು ನಿಗದಿ ಪಡಿಸಲಾಗಿತ್ತು. ಅದರಲ್ಲಿ 2542 ಹೆ. ಪ್ರದೇಶಕ್ಕೆ ಹನಿ ನೀರಾವರಿಯನ್ನು ಅಳವಡಿಸಲಾಗಿದ್ದು. ರೂ. 729.01 ಲಕ್ಷಗಳು ಖರ್ಚಾಗಿದ್ದು, ರೂ. 1515.9 ಲಕ್ಷ ಉಳಿಕೆ ಇರುತ್ತದೆ. ಇದನ್ನು 2009–10ನೇ ಸಾಲಿನಲ್ಲಿ ಭಾರತ ಸರ್ಕಾರದಿಂದ ಮರು ಮೌಲೀಕರಣಗೊಳಿಸಲಾಗಿದೆ.

ಅನುಬಂಧ–1

ರಾಜ್ಯದಲ್ಲಿ 2008–09ನೇ ಸಾಲಿನಲ್ಲಿ ಜಿಲ್ಲಾವಾರು ಕಬ್ಬು ಬೆಳೆಯ ವಿಸ್ತೀರ್ಣ

ಕ್ರ. ಸಂ.	ಜಿಲ್ಲೆ	ವಿಸ್ತೀರ್ಣ (ಹೆ.ಗಳಲ್ಲಿ)
1	2	3
1.	ಬೆಂಗಳೂರು (ನ)	35
2	ಬೆಂಗಳೂರು (ಗ್ರಾ)	1422
3	ಕೋಲಾರ	296

1	2	3
4	ತುಮಕೂರು	1120
5	ಶಿವಮೊಗ್ಗ	4492
6	ಚಿತ್ರದುರ್ಗ	2
7	ದಾವಣಗೆರೆ	11473
8	ಮೈಸೂರು	13277
9	ಚಾಮರಾಜನಗರ	11985
10	ಮಂಡ್ಯ	36913
11	ಕೊಡಗು	0
12	ಹಾಸನ	1470
13	ಚಿಕ್ಕಮಗಳೂರು	1498
14	ದ.ಕನ್ನಡ	12
15	ಉಡುಪಿ	15
16	ಧಾರವಾಡ	6334
17	ಗದಗ್	272
18	ಹಾವೇರಿ	1107
19	ಉ.ಕನ್ನಡ	4959
20	ಬೆಳಗಾಂ	137679
21	ಬಿಜಾಪುರ	36293
22	ಬಾಗಲಕೋಟೆ	62090
23	ರಾಯಚೂರು	0
24	ಕೊಪ್ಪಳ	922

1	2	3
25	ಬಳ್ಳಾರಿ	3102
26	ಗುಲ್ಬರ್ಗಾ	9924
27	ಬೀದರ್	29231
	ಒಟ್ಟು	**375923**

807 ಶ್ರೀ ಬಂಡೆಪ್ಪ ಕಾಶ್ಯಂಪೂರ್ ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷದಿಂದ ಈವರೆವಿಗೆ ಬೀದರ್ ಜಿಲ್ಲೆಗೆ ಜಲಾನಯನ ಇಲಾಖೆಯಿಂದ ಬಿಡುಗಡೆಯಾದ ಅನುದಾನದ ಮೊತ್ತ ಎಷ್ಟು;

ಆ) ಈ ಯೋಜನೆಯಿಂದ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ (ವಿವರ ನೀಡುವುದು)

ಇ) ಬಿಡುಗಡೆಯಾದ ಅನುದಾನದಲ್ಲಿ ಎಲ್ಲಾ ಕಾಮಗಾರಿಗಳು ಪೂರ್ಣವಾಗಿದೆಯೇ;

ಈ) ಹಾಗಿದ್ದಲ್ಲಿ, ಪೂರ್ಣಗೊಂಡ ಮತ್ತು ಅಪೂರ್ಣಗೊಂಡಿರುವ ಕಾಮಗಾರಿಗಳು ಯಾವುವು; (ವಿವರ ನೀಡುವುದು)

ಉ) ಈ ಯೋಜನೆಗೆ ಬಿಡುಗಡೆಯಾದ ಅನುದಾನದಲ್ಲಿ ಖರ್ಚಾಗಿರುವ ಮತ್ತು ಬಾಕಿ ಉಳಿದಿರುವ ಮೊತ್ತ ಎಷ್ಟು?

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು)

ಅ) ಕಳೆದ ವರ್ಷದಿಂದ ಈ ವರೆವಿಗೆ ಜಲಾನಯನ ಇಲಾಖೆಯಿಂದ ರೂ.746.30 ಲಕ್ಷ ಅನುದಾನ ಬಿಡುಗಡೆಯಾಗಿದೆ.

ಆ) ಈ ಯೋಜನೆಯಿಂದ ಸಮಪಾತಳಿ ಬದು, ಕೊರಕಲು ತಡೆ, ತಡೆಅಣೆ, ಕೃಷಿ ಹೊಂಡ, ವೇಸ್ಟ್ ವೇರ್, ತೋಟಗಾರಿಕೆ, ಅರಣ್ಯ, ಪಶು ಆರೋಗ್ಯ ಶಿಬಿರ ಹಾಗೂ ಮೇವು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಇ) ಇಲ್ಲ.

ಈ) **ಪೂರ್ಣಗೊಂಡಿರುವ ಕಾಮಗಾರಿಗಳು:**